**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ ಸಿ ನಂಃ 2594/2022**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**– ವಿರುದ್ಧ –**

ಆರೋಪಿ: **ಸರ್ಫರಾಜ ತಂದೆ ಮರ್ದಾನ್ ಸಾಬ್ ಯಲ್ಲೂರ,**
ವಯಸ್ಸುಃ 24 ವರ್ಷ, ಉದ್ಯೋಗಃ ಚಾಲಕ,
ವಾಸಃ ನೆಹರುನಗರ, 3 ನೇ ಕ್ರಾಸ್, ಶಿರಸಿ.

## ದೋಷಾರೋಪಣೆ

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ–

ದಿನಾಂಕಃ 20–02–2022 ರಂದು ಸಂಜೆ 07–30 ಗಂಟೆ ಸಮಯದಲ್ಲಿ ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯ ಹೊನ್ನಾವರ ತಾಲೂಕಾ ಬೈಲಗದ್ದೆ ಕ್ರಾಸ್ ಹತ್ತಿರ ಆರೋಪಿತನಾದ ನೀನು ನಿನ್ನ ಟಾಟಾ ಸುಮೋ ವಾಹನ ನಂಬರ್ ಕೆಎ–34/ಎಮ್–5050 ನೇದರಲ್ಲಿ ಸುಮಾರು 200 ಕೆಜಿ ಮಾಂಸವನ್ನು ತುಂಬಿ ಮಾರಾಟ ಮಾಡುವ ಉದ್ದೇಶದಿಂದ ಸಕ್ಷಮ ಪ್ರಾಧಿಕಾರದಿಂದ ಸಾಗಾಟ ಮಾಡಲು ಪರವಾನಿಗೆ ಪಡೆಯದೇ ಗೇರುಸೊಪ್ಪಾ ಕಡೆಯಿಂದ ಹೊನ್ನಾವರ ಕಡೆಗೆ ಸಾಗಾಟ ಮಾಡುತ್ತಿದ್ದಾಗ, ಆ ಮೂಲಕ **ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ ಅಧಿನಿಯಮ 4, 7, 12** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲೆ ವಿವರಿಸಿದ ಪ್ರಕಾರ ನೀನು ನಿನ್ನ ವಾಹನವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಬೈಲಗದ್ದೆ ಕ್ರಾಸ್ ಹತ್ತಿರ ಒಂದು ಮೋಟಾರ್ ಸೈಕಲ್‌ಗೆ ಡಿಕ್ಕಿ ಪಡಿಸಿ, ಆ ಮೂಲಕ ನೀನು **ಭಾರತೀಯ ದಂಡ ಸಂಹಿತೆಯ ಕಲಂ 279** ರಡಿಯಲ್ಲಿ ಅಪರಾಧವನ್ನು ಎಸಗಿರುವಿರಿ.

ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲೆ ವಿವರಿಸಿದ ಪ್ರಕಾರ ನೀನು ಮೋಟಾರ್ ಸೈಕಲಿಗೆ ಅಪಘಾತಪಡಿಸಿದ್ದಲ್ಲದೇ, ವಾಹನವನ್ನು ಸ್ಥಳದಲ್ಲಿ ನಿಲ್ಲಿಸದೇ ಅನುಮಾನಸ್ಪದ ರೀತಿಯಲ್ಲಿ ಆಪಾಯಕಾರಿಯಾಗಿ ಚಲಾಯಿಸಿಕೊಂಡು ಹೋಗಿ, ಆ ಮೂಲಕ **ಮೋಟಾರ ವಾಹನ ಕಾಯಿದೆ ಕಲಂ 184** ರಡಿಯಲ್ಲಿ ಅಪರಾಧವನ್ನು ಎಸಗಿರುವಿರಿ.

ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲೆ ವಿವರಿಸಿದ ಪ್ರಕಾರ ನೀನು ಹೊನ್ನಾವರ ತಾಲೂಕ ಗೇರುಸೊಪ್ಪಾ ಸರ್ಕಲ್ ಹತ್ತಿರ ವಾಹನ ತಪಾಸಣೆ ಕಾಲಕ್ಕೆ ವಾಹನವನ್ನು ಸ್ಥಳದಲಿಯೇ ಬಿಟ್ಟು ಸ್ಥಳದಿಂದ ಓಡಿ ಹೋಗಿದ್ದು, ಆ ಮೂಲಕ **ಮೋಟಾರ ವಾಹನ ಕಾಯಿದೆ ಕಲಂ 187** ರಡಿಯಲ್ಲಿ ಅಪರಾಧವನ್ನು ಎಸಗಿರುವಿರಿ.

ನೀವು ಮೇಲಿನ ಆರೋಪದಡಿಯಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ

ಪ್ರಶ್ನೆ 1. ನಿಮ್ಮ ಮೇಲೆ ಹೊರಿಸಲಾದ ಆರೋಪಣೆಯನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ

(ಸದರಿ ಹೇಳಿಕೆಯನ್ನು ನನ್ನ ಸಮಕ್ಷಮ ಅರ್ಥವಾಗುವ ಭಾಷ್ಷೆಯಲ್ಲಿ ಓದಿ ಹೇಳಿದ್ದು ಆರೋಪಿತನು ನ್ಯಾಯಾಲಯದ ಮುಂದೆ ನೀಡಿದ ವಿಚಾರಣೆಗಳು ಸರಿ ಇರುತ್ತವೆ ಅಂತಾ ಈ ಮೂಲಕ ಪ್ರಮಾಣಿಕರಿಸಲಾಗಿದೆ)

ಸಹಿ ಇದೆ

**ದಿನಾಂಕಃ24-01-2023**

(**ಚಂದ್ರಶೇಖರ ಈ ಬಣಕಾರ**).,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.